(*f*) The seeds were purchased within the State and also from out-side on cash and carry basis. Purchases were made at the prevailing rates on the date of purchase. There are no terms and conditions with regard to purchases.

(*g*) Yes.

(*h*) Yes.

ಶ್ರೀ ಎಚ್. ಡಿ. ದೇವೇಗೌಡ.—5.1 ಕೋಟಿ ರೂಪಾಯಿಗಳ ಸೀಡ್ಸ್‌ನ್ನು 3 ಏಜೆನ್ಸಿಗಳ ಮುಖೇನ ಕೊಂಡುಕೊಂಡಿದ್ದೇವೆಂದು ಹೇಳಿದಿರಿ. ಯಾವ ಯಾವ ಸಂಸ್ಥೆಗಳಿಂದ ಎಷ್ಟೆಷ್ಟು ಕೊಂಡು ಕೊಂಡಿದ್ದೀರೆಂದು ಹೇಳುತ್ತೀರಾ ?

† ಶ್ರೀ ಎನ್. ಚಿಕ್ಕೇಗೌಡ.—ಆ ಸಮಾಚಾರ ನನ್ನಲ್ಲಿ ಇಲ್ಲ. ಯಾರು ಯಾರಿಂದ ಎಷ್ಟೆಷ್ಟು ಕೊಂಡಿದ್ದಾರೆ ಎನ್ನುವಂತಹ ಸಮಾಚಾರ ತರಿಸಿಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—5.1 ಕೋಟಿ ರೂಪಾಯಿಗಳ ಸೀಡ್ಸನ್ನು ಯಾವ ಮಾರ್ಗವನ್ನು ಅನುಸರಿಸಿ ಕೊಂಡುಕೊಂಡಿರಿ ; ಯಾರಿಂದ ಕೊಂಡುಕೊಂಡಿರಿ ?

ಶ್ರೀ ಎನ್. ಚಿಕ್ಕೇಗೌಡ.—ಬಿತ್ತನೆ ಬೀಜವನ್ನು ನಮ್ಮ ಸಂಸ್ಥಾನದಲ್ಲಿಯೂ ಕೊಂಡು ಕೊಂಡಿದ್ದೇವೆ ಮತ್ತು ಆಂಧ್ರದಿಂದಲೂ ಕೊಂಡುಕೊಂಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಕೊಟೇಷನ್ ಕಾಲ್‌ಫಾರ್ ಮಾಡಿದ್ದೀರಾ ? ಇಲ್ಲವೇ ಓಪನ್ ಮಾರ್ಕೆಟ್ಟಿನಿಂದ ತಂದಿದ್ದೀರಾ ಹೇಳಿ, ಹೇಗೆ ಕೊಂಡುಕೊಂಡಿದ್ದೀರಿ ? ಯಾರಿಂದ ಕೊಂಡುಕೊಂಡಿದ್ದೀರಿ ಎಂಬುದನ್ನು ಹೇಳಿ.

ಶ್ರೀ ಎನ್. ಚಿಕ್ಕೇಗೌಡ.—ಪ್ರಿವೇಲಿಂಗ್ ಮಾರ್ಕೆಟಿಂಗ್ ರೇಟ್ಸ್‌ನಲ್ಲಿ, ಓಪನ್ ರೇಟ್ಸ್‌ನಲ್ಲಿ ಬೀಜವನ್ನು ತೆಗೆದುಕೊಂಡಿರಬಹುದು, ಕೆಲವು ವ್ಯಕ್ತಿಗಳಿಂದ ಕೊಂಡುಕೊಂಡಿದ್ದಾರೆ ಮತ್ತೆ ಆಂಧ್ರ ರಾಜ್ಯದಿಂದಲೂ ಕೊಂಡಿಕೊಂಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಯಾವ ಮಾರ್ಗವನ್ನು ಅನುಸರಿಸಿಕೊಂಡು ಕೊಂಡಿದ್ದೀರಿ ? ಮಂತ್ರಿಗಳು ಹೋಗಿ ವಿತರಣೆ ಮಾಡಿದರೆಂದು ಪತ್ರಿಕೆಯಲ್ಲಿ ಇದೆ. ಮಂತ್ರಿಗಳು ನೇರವಾಗಿ ವ್ಯಾಪಾರಿಗಳ ಹತ್ತಿರ ಹೋಗಿ ಕೊಂಡುಕೊಂಡರೆ ? ಕೋಟೇಷನ್ ಕಾಲ್‌ಫಾರ್ ಮಾಡಿದರೆ ?

ಶ್ರೀ ಎನ್. ಚಿಕ್ಕೇಗೌಡ.—ಓಪನ್ ಮಾರ್ಕೆಟ್ ಎಂದು ಹೇಳಿದೆ ; ಪ್ರಿವೇಲಿಂಗ್ ಮಾರ್ಕೆಟ್ ರೇಟ್ಸ್‌ನಲ್ಲಿ ಅಧಿಕಾರಿಗಳು ಹೋಗಿ 3 ಸಂಸ್ಥೆಗಳಿಂದ ಕೊಂಡುಕೊಂಡಿದ್ದಾರೆ. ಮಂತ್ರಿಗಳು ನೇರವಾಗಿ ತೆಗೆದುಕೊಂಡಂಥ ಮಾಹಿತಿ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮಂತ್ರಿಗಳು ಹೋಗಿ ವಿತರಣೆ ಮಾಡುತ್ತಿರುವ ಫೋಟೋ ಬಂದಿದೆ. ಸಮಯ ಬಂದಾಗ ಅದನ್ನು ಇಲ್ಲಿ ಇಡೋಣ. ರಾಜ್ಯದ ಒಳಗಡೆ ಕೊಂಡುಕೊಂಡಿರುವುದು ಎಷ್ಟು ಹೊರಗಡೆ ಕೊಂಡುಕೊಂಡಿರುವುದು ಎಷ್ಟು ಎಂಬುದಕ್ಕೆ ವಿವರಣೆ ಕೊಡುತ್ತೀರಾ?

ಶ್ರೀ ಎನ್. ಚಿಕ್ಕೇಗೌಡ.—ವಿವರ ನನ್ನ ಮುಂದೆ ಇಲ್ಲ.

ಅಧ್ಯಕ್ಷರು.—ಪ್ರಶ್ನೆಯಲ್ಲಿ the mode of purpose of the seed, the purchase rate and distribution rate ಎಂದು ಈ ಎಲ್ಲಾ ವಿವರಗಳನ್ನು ಕೇಳಿದ್ದಾರೆ. Therefore the question is withheld until all the details are got.

RATES OF BULLDOZERS PER HOUR

482. Sri B. BYRAPPAJI (Turuvekere) :—

Will the Minister for Agriculture and Animal Husbandry be pleased to state :—

(*a*) the bulldozer rate per hour fixed by Karnataka Agro-Industries Corporation for levelling the agriculture and non-agricultural lands ;

(*b*) whether the Government has realised that the rate fixed for levelling agricultural land of the ryot is very high from the ryot's point of view ;

(*c*) if so, whether the Government would take steps to reduce this high rate ?

Sri N. CHIKKE GOWDA (Minister for Agriculture and Animal Husbandry) :—

(*a*) 1. Russian C-100 T-100 M, BEML D-50, CAT-D 5A of 93 to 108 H.P.—Rs. 80-00 per Hour.

2. DAD Cattle Piller of 75 H.P.—Rs. 57-00 per Hour.

3. Rumanian-S-650 of 65 H.P.—Rs. 52-00 per Hour.

(*b*) No.

(*c*) Does not arise.

ಶ್ರೀ ಬಿ. ಬೈರಪ್ಪಾಜಿ. —ಈಗ ವ್ಯವಸಾಯ ಹಾಗೂ ವ್ಯವಸಾಯೇತರ ಭೂಮಿಗೆ ಹದ ಮಾಡಲು ಒಂದೇ ದರವನ್ನು ನಿಗದಿ ಮಾಡಿದ್ದೀರಿ ಒಂದೇ ದರವನ್ನು ನಿಗದಿ ಮಾಡಿರತಕ್ಕದ್ದು ಸರಿಯಲ್ಲ. ವ್ಯವಸಾಯಕ್ಕೆ ಕೊಡತಕ್ಕಂಥ ವ್ಯವಸಾಯದ ಭೂಮಿಯನ್ನು ಸಮ ಮಾಡತಕ್ಕ ಭೂಮಿಗಳಿಗೆ ಕಡಿಮೆ ರೇಟ್ ಇರಬೇಕು ವ್ಯವಸಾಯೇತರ ಭೂಮಿಗಳನ್ನು ಸಮ ಮಾಡತಕ್ಕ ಸಂದರ್ಭದಲ್ಲಿ ಹೆಚ್ಚು ಇರಬೇಕಾದ್ದು ನ್ಯಾಯ, ಹಿಂದೆ ಮಂತ್ರಿಗಳು ಆಗಿದ್ದಂಥ ಶ್ರೀ ಕೆ. ಎಚ್. ಪಾಟೀಲರಿಗೂ ಕೂಡ ಈ ಬಗ್ಗೆ ಮನವಿ ಸಲ್ಲಿಸಿ ಇದನ್ನು ಪುನರ್ ವಿಮರ್ಶೆ ಮಾಡಬೇಕೆಂದು ಕೇಳಿದೆ. ಆ ಬಗ್ಗೆ ಏನು ಕಾರ್ಯಕ್ರಮವನ್ನು ತಾವು ಕೈಕೊಂಡಿದ್ದಿರಿ ತಿಳಿಸುತ್ತೀರಾ ?

† ಶ್ರೀ ಎನ್. ಚಿಕ್ಕೇಗೌಡ. —ಹಿಂದೆ ವ್ಯವಸಾಯ ಮತ್ತು ವ್ಯವಸಾಯ ಅಲ್ಲದೇ ಇರುವುದಕ್ಕೆ ಎರಡು ರೇಟ್ ಫಿಕ್ಸ್ ಮಾಡಿದ್ದು ನಿಜ, ಅದನ್ನು ತೆಗೆದು ಒಂದೇ ರೇಟ್ ನಿಗದಿ ಮಾಡಿದೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ನಿರ್ಣಯವನ್ನು ತೆಗೆದುಕೊಂಡು ಅದನ್ನು ಜಾರಿಗೆ ಕೊಟ್ಟಿದ್ದಾರೆ. ಅದಕ್ಕೆ ಕಾರಣ ಹಿಂದೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಆಕ್ಷೇಪಣೆಯಲ್ಲಿ ಆಗಿ ಎಷ್ಟು ಎಕ್ಸ್‌ಪೆಂಡೀಚರ್ ಬರುತ್ತಾ ಇದೆ ಅದನ್ನು ಗಮನದಲ್ಲಿಟ್ಟುಕೊಂಡು ರೇಟ್ಸ್ ಫಿಕ್ಸ್ ಮಾಡಬೇಕೆಂದು ಹೇಳಿದ ಪ್ರಕಾರ ಅದು ಮಾಡಿರತಕ್ಕದ್ದು. ಎರಡು ರೇಟ್ ಇಡದೇ ಒಂದೇ ರೇಟ್ ಇಟ್ಟಿರತಕ್ಕದ್ದು ನಿಜ.

ಶ್ರೀ ಬಿ. ಬೈರಪ್ಪಾಜಿ.—ತಾವು ಒಂದು ರೇಟ್ ಇರತಕ್ಕಂಥದ್ದು ನಿಜವೆಂದು ಹೇಳಿದಿರಿ. ಅದೇ ರೈತನಿಗೆ ಕಷ್ಟವಾಗಿರತಕ್ಕ ಸಮಸ್ಯೆ. ಒಂದು ಗಂಟೆಗೆ ನುಮಾರು 60 ರೂಪಾಯಿ ಇತ್ತು ಈಗ ಏಕದಂ 80—82 ರೂಪಾಯಿಯನ್ನು ಮಾಡಿದ್ದೀರಿ. ಯಾವುದಾದರೂ ಕಾರ್ಖಾನೆಗೆ ಕೊಡುವ ಹಾಗಿದ್ದರೆ ಅದಕ್ಕೂ ಒಂದೇ ರೇಟು ಬಡವ ರೈತ ಅವನಿಗೂ ಒಂದೇ ರೇಟು ಇರತಕ್ಕದ್ದು ನ್ಯಾಯವಾದುದು ಅಲ್ಲ ಇದನ್ನು ಪರಿಶೀಲನೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ? ನೋ ಲಾಸ್ ನೋ ಬೆನಿಫಿಟ್ ಬೇಸಿಸ್ ಮೇಲೆ ವ್ಯವಸಾಯಕ್ಕೆ ಕೊಡತಕ್ಕ ಸಂದರ್ಭದಲ್ಲಿ ಆ ರೀತಿ ತಾವು ಯೋಚನೆ ಮಾಡಿ ರೈತನಿಗೆ ಬುರ್ಡೊಜರ್ ಓಡಿಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

Sri N. CHIKKE GOWDA.—Even these rates are not economical. Even the A. G. and the P.A.C. have also observed that the economic rate would be even Rs. 20 more than the present figure. On a consideration of these aspects, the rates have been fixed. The cost sheet is also before me.

ಶ್ರೀ ಡಿ. ಹಲಗೇಗೌಡ.—ನೀವು ಹಾಕಿರತಕ್ಕಂಥ ರೇಟ್ ಹೆಚ್ಚು ಏನು ಅಲ್ಲ ಎಂದು ತಾವು ಹೇಳಿದ್ದೀರಿ. ಅದು ರೈತರಿಗೆ ಭಾರಿ ಹೊರೆ. ಈಗಿರುವ ರೇಟನ್ನು ಕಡಿಮೆ ಮಾಡಿ ಅಂದರೆ ಅರ್ಥಕ್ಕೆ ಸಹಾಯ ಮಾಡುತ್ತೀರಾ ? ಇಲ್ಲವಿದ್ದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರಿಂದ ರಿಬೇಟ್ ಇಳಿಸಿ ಕೊಡಿಸಿ ವ್ಯವಸಾಯಗಾರರಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಈಗ ಆಯಿಲ್ ಬೆಲೆ ಹೆಚ್ಚಾಗಿರುವುದು ಗಣನೆಗೆ ತೆಗೆದುಕೊಂಡರೆ ಹೆಚ್ಚು ಮಾಡಬೇಕಾದ ಪ್ರಸಂಗವಿದೆ. ಎಲ್ಲಾ ವಸ್ತುಗಳ ಬೆಲೆ ಹೆಚ್ಚಾಗಿರುವುದನ್ನು ನೋಡಿದರೆ ಇನ್ನೂ ಹೆಚ್ಚು ಮಾಡಬೇಕಾದ ಪ್ರಸಂಗ ಬಂದಿದೆ. ಈಗಿರತಕ್ಕ ರೇಟ್ ಕಡಿಮೆ, ಅದರಿಂದ ನಷ್ಟವಾಗುತ್ತಿದೆ. ಆದ್ದರಿಂದ ತಾವು ಹೇಳಿದಂಥ ಸಲಹೆಯನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಡಿ. ಹಲಗೇಗೌಡ.—ಈಗಿರತಕ್ಕ ದರ ಕಡಿಮೆ ಇದೆ ಅದರಿಂದ ನಷ್ಟವಾಗುತ್ತಿದೆಂದು ಹೇಳಿದಿರಿ. ಅದನ್ನು ಹೆಚ್ಚಿಸುವ ಪ್ರಸಂಗ ಬಂದರೆ ವ್ಯವಸಾಯಕ್ಕೆ ರಿಬೇಟ್ ಕೊಡುವುದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಈಗ ನಾನು ಹೆಚ್ಚಿಸುತ್ತೇವೆಂದು ಹೇಳಿಲಿಲ್ಲ. ಹೆಚ್ಚಿಸುವ ಕಾಲದಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಆ ಕಾಲದಲ್ಲಿ ಮಾನ್ಯಸದಸ್ಯರು ಕೊಟ್ಟ ಸಲಹೆಯನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—'ನೋ ಪ್ರಾಫಿಟ್—ನೋ ಲಾಸ್' ಬೇಸಿಸ್ ಮೇಲೆ ಅಥವಾ ಸಬ್‌ಸಿಡೈಜ್ ಮಾಡುವುದರ ಮೂಲಕ ಯಾವುದಾದರೊಂದು ರೀತಿಯಲ್ಲಿ ರೈತರಿಗೆ ಅನುಕೂಲ ಮಾಡಲು ಈ ದರವನ್ನು ಪುನರ್‌ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಇತ್ತೀಚೆಗೆ ಎಣ್ಣೆ ದರ ಏರಿರುವುದನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಈಗ ನಾವು ನಿಗದಿ ಮಾಡಿರುವುದೂ ಕೂಡ ಬಹಳ ಕಡಮೆ ಎಂದೇ ಭಾವಿಸಬೇಕು. ಈ ದರವನ್ನು ನಿಗದಿ ಮಾಡಿದ್ದರೂ ಇದರಲ್ಲೂ ಲುಕ್ಸಾನಾಗುತ್ತಿದೆ. ಆದುದರಿಂದ ಸಬ್‌ಸಿಡೈಜ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಸ್. ನಿಜ್ಜಪ್ಪ.—ಸರ್ಕಾರದವರು ರೈತರಿಗೆ ಸ್ಪ್ರೇಯರ್ ಇತ್ಯಾದಿ ವ್ಯವಸಾಯೋಪಕರಣಗಳನ್ನು ಸಬ್‌ಸಿಡೈಜ್ ಮಾಡಿ ಕೊಡುತ್ತಿರುವಂತೆ ಇಲ್ಲಿಯೂ ಅರ್ಧವನ್ನು ರೈತರು ಮತ್ತು ಉಳಿದರ್ಧವನ್ನು ಸರ್ಕಾರದವರು ಕೊಡುವಂತೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಎನ್. ಚಿಕ್ಕೇಗೌಡ.—ಅದು ಸಾಧ್ಯವಿಲ್ಲವೆಂದು ಆಗಲೇ ಹೇಳಿದ್ದೇನೆ.

ಶ್ರೀ ಬಿ. ಬೈರಾರೆಡ್ಡಿ.—ಸ್ವಲ್ಪಮಟ್ಟಿಗೆ ಆಗ್ರೋ ಇಂಡಸ್ಟ್ರೀಸ್ ಸಂಸ್ಥೆಗೆ ನಷ್ಟವಾದರೂ ಚಿಂತೆಯಿಲ್ಲ. ಇದನ್ನು 'ನೋ ಲಾಸ್—ನೋ ಪ್ರಾಫಿಟ್' ಬೇಸಿಸ್ ಮೇಲೆ ನಿಗದಿ ಮಾಡಲು ಪುನರ್ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಇದು ಉತ್ತಮವಾದ ಸಲಹೆ. ಸರ್ಕಾರದವರು ಇದನ್ನು ಪರಿಶೀಲನೆ ಮಾಡುತ್ತಾರೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ನೆಲ ಸಮ ಮಾಡುವುದಕ್ಕೆ ಟ್ರಾಕ್ಟರುಗಳನ್ನು ರೈತರು ತೆಗೆದುಕೊಂಡಾಗ ಅವರು ಇಂತಿಷ್ಟು ಹಣವನ್ನು ಮುಂಗಡವಾಗಿ ಡಿಪಾಜಿಟ್ ಮಾಡಬೇಕೆಂದು ಹೇಳಿ ಸ್ವಲ್ಪ ಹಣವನ್ನು ತೆಗೆದುಕೊಳ್ಳುತ್ತಾರೆ. ಕೆಲವು ಮುಗಿದ ನಂತರ ಆ ಹಣವನ್ನು ವಾಪಸ್ ಪಡೆಯತಕ್ಕ ಕಾಲದಲ್ಲಿ ಕಾರ್ಪೊರೇಷನ್‌ನವರು ರೈತರಿಗೆ ಒಂದು ಕ್ಯಾಸ್ಟ್ ಡೆಕ್ ಮೂಲಕ ಹಣವನ್ನು ಮರುಪಾವತಿ ಮಾಡತಕ್ಕ ಪದ್ಧತಿ ಇರುವುದರಿಂದ ಅನೇಕ ರೈತರಿಗೆ ಬ್ಯಾಂಕ್ ಅಕೌಂಟುಗಳು ಇರುವುದಿಲ್ಲ, ಅಂಥವರಿಗೆ ಈ ಹಣವನ್ನು ವಾಪಸ್ ಪಡೆಯುವುದೇ ಒಂದು ದೊಡ್ಡ ಕಷ್ಟವಾಗಿದೆ. ಇದಕ್ಕೆ ಒಂದು ಸುಲಭವಾದ ಮಾರ್ಗವನ್ನು ಹುಡುಕುವುದಕ್ಕಾಗುವುದಿಲ್ಲವೇ ?

ಶ್ರೀ ಎನ್. ಚಿಕ್ಕೇಗೌಡ.—ನಗದಾಗಿ ಹಣ ಕೊಟ್ಟರೆ ಇದಲ್ಲ ಇನ್ನೊಂದು ತೊಂದರೆ ಬರುತ್ತದೆ ಮಾನ್ಯ ಸದಸ್ಯರು ಸುಲಭವಾದ ಮಾರ್ಗವಿದ್ದರೆ ತಿಳಿಸಲಿ, ಅದನ್ನು ಪರಿಶೀಲಿಸುತ್ತೇನೆ.